**ಹೆಚ್ಚುವರಿ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ, ಜಮಖಂಡಿ.**

O.S. No- 38/2021

PW-1

ದಿನಾಂಕಃ 10.07.2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಂದುವರಿದ ಮುಖ್ಯ ವಿಚಾರಣೆಃ ಶ್ರೀ. ವಿ.ಎಸ್.ಬಿ. ವಾದಿ ಪರ ವಕೀಲರಿಂದ-**

ಪ್ರತಿವಾದಿಯರು, ನಾನು ನನ್ನ ಜಮೀನಿನಲ್ಲಿ ಹಾಕಿದ ಪೈಪಲೈನ್ ಗಳನ್ನು ತೆಗೆದು ಹಾಕುವಾಗ ನಾನು ಫೋಟೋಗಳನ್ನು ತೆಗೆದಿದ್ದು, ಅವುಗಳನ್ನು ಈ ದಿನ ನ್ಯಾಯಾಲಯದ ಮುಂದೆ ಹಾಜರುಪಡಿಸುತ್ತಿದ್ದೇನೆ. ನನ್ನ ಪೈಪಲೈನ್ ಹಾದುಬರುವ ಜಮೀನಿನ ಮಾಲೀಕರ ಒಪ್ಪಿಗೆ ಪತ್ರವನ್ನು ಹಾಜರುಪಡಿಸಿದ್ದೇನೆ. ಒಪ್ಪಿಗೆ ಪತ್ರವನ್ನು ಬರೆದುಕೊಟ್ಟ ಸೋಮಯ್ಯ ಶಂಕರಯ್ಯ ಮಠಪತಿ ಇವರು ಈ ಪ್ರಕರಣದಲ್ಲಿ ನನ್ನ ಪರವಾಗಿ ಸಾಕ್ಷ್ಯ ನುಡಿದಿರುತ್ತಾರೆ. ನೀರಿನ ಪರವಾನಗಿ ಪಡೆದ ದಾಖಲೆಗಳನ್ನೂ ಸಹ ಹಾಜರುಪಡಿಸಿದ್ದೇನೆ.

ನಾನು ಈಗಾಗಲೇ ನನ್ನ ಲಿಖಿತ ಮುಖ್ಯ ವಿಚಾರಣೆ ಶಪತ ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದಕ್ಕೆ ಪೂರಕವಾಗಿ ದಾಖಲೆಗಳನ್ನು ಸಲ್ಲಿಸುತ್ತಿದ್ದೆನೆ.

1. 14 ಫೋಟೋಗಳನ್ನು ಹಾಜರುಪಡಿಸಿದ್ದು ಅದನ್ನು ನಿಪಿ-10 ರಿಂದ ನಿಪಿ-23 ಎಂದು ಗುರುತಿಸಲಾಯಿತು.
2. ಒಂದು ಪೆನ್ ಡ್ರೈವ್ ಅನ್ನು ಹಾಜರುಪಡಿಸಿದ್ದು ಅದನ್ನು ನಿಪಿ-24 ಎಂದು ಗುರುತಿಸಲಾಯಿತು.
3. ಒಂದು ಒಪ್ಪಿಗೆ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ-25 ಎಂದು ಗುರುತಿಸಲಾಯಿತು.
4. ಒಂದು ಕೃಷ್ಣ ಭಾಗ್ಯ ಜಲ ನಿಗಮ ನೀಡಿದ ರಸೀದಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-26 ಎಂದು ಗುರುತಿಸಲಾಯಿತು.
5. ನೀರಿನ ಪರವಾನಗಿ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ-27 ಎಂದು ಗುರುತಿಸಲಾಯಿತು.
6. ದಿನಾಂಕಃ 23.11.2017 ರ ಒಪ್ಪಂದ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ-28 ಎಂದು ಗುರುತಿಸಲಾಯಿತು.
7. 2022-23 ರ ಕೃಷ್ಣ ಭಾಗ್ಯ ಜಲ ನಿಗಮ ನೀಡಿದ ರಸೀದಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-29 ಎಂದು ಗುರುತಿಸಲಾಯಿತು.
8. ನೀರಿನ ಪರವಾನಗಿಯ ನವೀಕರಣ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ-30 ಎಂದು ಗುರುತಿಸಲಾಯಿತು.
9. 2023-24 ರ ಕೃಷ್ಣ ಭಾಗ್ಯ ಜಲ ನಿಗಮ ನೀಡಿದ ರಸೀದಿಯನ್ನು ಹಾಜರುಪಡಿಸಿದ್ದು ಅದನ್ನು ನಿಪಿ-31 ಎಂದು ಗುರುತಿಸಲಾಯಿತು.

10. ನೀರಿನ ಪರವಾನಗಿಯ ನವೀಕರಣ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ-32 ಎಂದು ಗುರುತಿಸಲಾಯಿತು.
11. ಭಾ.ಸಾ.ಅ. ಕಲಂ 63(4)(ಸಿ) ಪ್ರಮಾಣ ಪತ್ರವನ್ನು ಹಾಜರುಪಡಿಸಿದ್ದು ಅದನ್ನು ನಿಪಿ-33 ಎಂದು ಗುರುತಿಸಲಾಯಿತು.

**ಮುಂದುವರಿದ ಪಾಟಿ ಸವಾಲುಃ ಶ್ರೀ. ಆರ್.ಆರ್.ಕೆ. ಪ್ರತಿವಾದಿ ಪರ ವಕೀಲರಿಂದಃ**

ಫೋಟೋಗಳನ್ನು ನಾನೇ ತೆಗೆದಿದ್ದೇನೆ. ನನ್ನ ಮೊಬೈಲ್ ನಿಂದ ತೆಗೆದಿದ್ದೇನೆ. ಮೊಬೈಲ್ ಕಂಪನಿ ಹೆಸರು ಗೊತ್ತಿಲ್ಲ. ಅದು ಎಷ್ಟು ರ್ಯಾಮ್ ಮತ್ತು ಎಷ್ಟು ಜಿ.ಬಿ. ಎಂದು ಗೊತ್ತಿಲ್ಲ. ನಾನು ಹಾಜರುಪಡಿಸಿದ ಫೋಟೋಗಳಲ್ಲಿ ಅದು ಯಾವ ಸರ್ವೇ ನಂಬರ ಎಂದು ಗೊತ್ತಾಗುವುದಿಲ್ಲ ಎಂದರೆ ಸರಿ. ನಾನು ಹಾಜರುಪಡಿಸಿದ ವ್ಯಕ್ತಿಗಳ ಮುಖ ಸ್ಪಷ್ಟವಾಗಿ ಕಾಣುವುದಿಲ್ಲ ಎಂದರೆ ಸರಿ. ಸದರಿ ಫೋಟೋಗಳಲ್ಲಿರುವ ವ್ಯಕ್ತಿಗಳು ಯಾರು ಎಂದು ಗೊತ್ತಿಲ್ಲ. ಸದರಿ ಫೋಟೋಗಳನ್ನು ಅವರವರ ಜಮೀನಿನಲ್ಲಿ ಕೆಲಸ ಮಾಡುವ ಸಮಯದಲ್ಲಿ ನಾನು ತೆಗೆದಿದ್ದೇನೆ ಎಂದರೆ ಸರಿಯಲ್ಲ. ಫೋಟೋದಲ್ಲಿರುವ ವಾಹನ ಯಾರದು ಎಂದು ಗೊತ್ತಿಲ್ಲ. ಫೋಟೋಗಳನ್ನು ದಿನಾಂಕಃ 28.02.2021 ರಂದು ತೆಗೆದಿದ್ದೇನೆ. ಪ್ರತಿವಾದಿಯರು ಮೋಟಾರು ಕಳುವು ಮಾಡುತ್ತಿದ್ದಾರೆ ಎಂದು ನಾನು ಪೋಲೀಸ ದೂರು ದಾಖಲಿಸಿಲ್ಲ. ನಾನು ದೂರದಲ್ಲಿ ಅವರವರು ಕೆಲಸ ಮಾಡುತ್ತಿರುವ ಸಮಯದಲ್ಲಿ ಫೋಟೋ ತೆಗೆದಿದ್ದೇನೆ ಎಂದರೆ ಸರಿಯಲ್ಲ. ಪೋಲೀಸರಿಗೆ ದೂರು ದಾಖಲಿಸಲು ತೊಂದರೆ ಇರಲಿಲ್ಲ ಎಂದರೆ ಅವರು ದೂರು ದಾಖಲಿಸಿಕೊಳ್ಳಲಿಲ್ಲ. ನಾನು ಮೇಲಾಧಿಕಾರಿಗಳಲ್ಲಿ ದೂರು ದಾಖಲಿಸಿಲ್ಲ. ಈ ಸಂಬಂಧ ನಾನು ನ್ಯಾಯಾಲಯದಲ್ಲಿ ಫಿರ್ಯಾದಿ ದಾಖಲಿಸಿಲ್ಲ.

ಸದರಿ ಫೋಟೋಗಳನ್ನು ಯಾವ ಸ್ಟುಡಿಯೋದಲ್ಲಿ ತೆಗೆಸಿದ್ದೇನೆ ಎಂಬುದಕ್ಕೆ ದಾಖಲೆಗಳನ್ನು ಹಾಜರುಪಡಿಸಿಲ್ಲ. ಫೋಟೋಗಳನ್ನು ಪಾಟೀಲ ಇವರ ಕಡೆ ಪ್ರಿಂಟ್ ತೆಗೆಸಿಕೊಂಡಿದ್ದೇನೆ. ಪ್ರಿಂಟ್ ತೆಗೆಸಿಕೊಂಡ ರಸೀದಿ ಪಡೆದುಕೊಂಡಿಲ್ಲ. ನಾನು ಈ ಫೋಟೋಗಳನ್ನು ಕಾನೂನು ಬದ್ಧವಾಗಿ ಸಲ್ಲಿಸಬೇಕಾದ ಪ್ರಮಾಣ ಪತ್ರವನ್ನು ಸಲ್ಲಿಸಿಲ್ಲ ಎಂದರೆ ಸರಿಯಲ್ಲ. ನಾನು ಫೋಟೋಗಳನ್ನು ಎಡಿಟ್ ಮಾಡಿಸಿ ತಂದಿದ್ದೇನೆ ಎಂದರೆ ಸರಿಯಲ್ಲ. ಒಪ್ಪಿಗೆ ಪತ್ರಕ್ಕೆ ನನ್ನ ಸಹಿ ಇಲ್ಲ ಎಂದರೆ ಸರಿ. ನಾನು ಸುಳ್ಳು ಒಪ್ಪಿಗೆ ಪತ್ರ ಸೃಷ್ಟಿಮಾಡಿಕೊಂಡು ಬಂದಿದ್ದೇನೆ ಎಂದರೆ ಸರಿಯಲ್ಲ. ನಾನು ಪ್ರಕರಣ ದಾಖಲಿಸುವಾಗ ಆಗಲೀ ಅಥವಾ ನನ್ನ ಸಾಕ್ಷ್ಯ ಪ್ರಮಾಣ ಪತ್ರವನ್ನು ಸಲ್ಲಿಸುವಾಗ ಆಗಲೀ ಫೋಟೋವನ್ನು ಹಾಜರುಪಡಿಸಿಲ್ಲ ಎಂದರೆ ಸರಿ. ನನ್ನ ಜಮೀನಿಗೆ ಹೊಂದಿಕೊಂಡು ಪ್ರತಿವಾದಿಯರ ಜಮೀನು ಇಲ್ಲ ಎಂದರೆ ಸರಿ. ನಾನು ಹಾಕಿದ ಪೈಪಲೈನ್ ಮೇಲೆ ಪ್ರತಿವಾದಿಯರಿಗೆ ಸಂಬಂಧ ಇಲ್ಲ ಎಂದರೆ ಸರಿ. ನನ್ನ ಅಜ್ಜ ಒಂದು ಜಮೀನನ್ನು 2 ನೇ ಪ್ರತಿವಾದಿಗೆ ಕೊಟ್ಟಿದ್ದರು ಎಂದರೆ ಸರಿ. ಅದರಲ್ಲಿ ಪಾಲು ಬೇಕು ಎಂದು ಹಿರಿಯ ದಿವಾಣಿ ನ್ಯಾಯಾಲಯದಲ್ಲಿ ಪ್ರಕರಣ ದಾಖಲಿಸಿದ್ದು ಅದು ವಜಾಗೊಂಡಿದೆ ಎಂದರೆ

ಸರಿ. ಪ್ರತಿವಾದಿಯರು ಯಾವುದೇ ತೊಂದರೆ ಕೊಡದೇ ಇದ್ದರೂ ಕೂಡ ಅವರಿಗೆ ತೊಂದರೆ ಕೊಡುವ ಉದ್ದೇಶದಿಂದ ಅವರ ವಿರುದ್ಧ ಸುಳ್ಳು ದಾವೆ ದಾಖಲಿಸಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲಾ**

ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೆ.ಸರಿ ಇದೆ

Sd/-

ಹೆಚ್ಚುವರಿ ದಿವಾಣಿ ಮತ್ತು ಜೆ.ಎಂ.ಎಫ್.ಸಿ.
ನ್ಯಾಯಾಧೀಶರು ಜಮಖಂಡಿ.